# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಜಿಲ್ಲಾ ಪಂಚಾಯತ್‌ಗಳಲ್ಲಿ ಡಿ.ಆರ್.ಡಿ.ಎ. ಕಾರ್ಯಕ್ರಮದಡಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರುಗಳ ವೇತನ ಲೆಕ್ಕ ಶೀರ್ಷಿಕೆ 2515ರಡಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

100

**ಓದಲಾಗಿದೆ:**

1. ಕಡತ ಸಂಖ್ಯೆ: ಗ್ರಾಅಪ 10 ಎಸ್‌ಜೆವೈ (ಡಿಆರ್‌ಡಿಎ) 2014
2. ಕಡತ ಸಂಖ್ಯೆ: ಗ್ರಾಅಪ 22 ಎಸ್‌ಜೆವೈ (ಡಿಆರ್‌ಡಿಎ) 2014

**ಪ್ರಸ್ತಾವನೆ:**

ಮೇಲೆ (1) ಮತ್ತು (2)ರಲ್ಲಿ ಓದಲಾದ ಕಡತಗಳಲ್ಲಿ ಬಾಗಲಕೋಟೆ, ಬೆಳಗಾವಿ, ವಿಜಯಪುರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಗದಗ್, ಹಾವೇರಿ, ಮಂಡ್ಯ, ರಾಯಚೂರು, ತುಮಕೂರು, ಕೊಪ್ಪಳ ಮತ್ತು ಉಡುಪಿ ಜಿಲ್ಲಾ ಪಂಚಾಯತ್‌ಗಳಲ್ಲಿ ಡಿ.ಆರ್.ಡಿ.ಎ ಕಾರ್ಯಕ್ರಮದಡಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರುಗಳ ವೇತನ ವೆಚ್ಚಕ್ಕಾಗಿ ಒಟ್ಟು ರೂ.605.86ಲಕ್ಷಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ 2515–00–101–0–01(ಯೋಜನೆ) ಅಡಿ ಬಿಡುಗಡೆಗೊಳಿಸುವಂತೆ ಪ್ರಸ್ತಾವಿಸಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುವ ಸಂಬಂಧ ಕೆಳಗಿನಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 155 ವೆಚ್ಚ6/2014 ದಿನಾಂಕ:5ನೇ ಡಿಸೆಂಬರ್ 2014

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಯೋಜನೆ ಲಿಂಕ್ ಡಾಕ್ಯುಮೆಂಟ್ ಲೆಕ್ಕ ಶೀರ್ಷಿಕೆ 2515–00–101–0–01–101–ಡಿ.ಆರ್.ಡಿ.ಎ. ಆಡಳಿತ ವೆಚ್ಚ ಕಾರ್ಯಕ್ರಮದಡಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರುಗಳ ವೇತನ ವೆಚ್ಚಕ್ಕಾಗಿ ರೂ.605.86ಲಕ್ಷ (ರೂಪಾಯಿ ಆರು ನೂರ ಐದು ಲಕ್ಷದ ಎಂಬತ್ತಾರು ಸಾವಿರಗಳು ಮಾತ್ರ)ಗಳ ಅನುದಾನವನ್ನು ಕೆಳಕಂಡ ಜಿಲ್ಲಾ ಪಂಚಾಯತ್‌ಗಳಿಗೆ ಲೆಕ್ಕ ಶೀರ್ಷಿಕೆ 2515–00–196–6–06(ಯೋಜನೆ) ಅಡಿ ಬಿಡುಗಡೆಗೊಳಿಸಲಾಗಿದೆ. ಬಿಡುಗಡೆಯಾದ ಅನುದಾನವನ್ನು ಜಿಲ್ಲಾ ಪಂಚಾಯತ್ ನಿಧಿ–1ಕ್ಕೆ ಜಮೆ ಮಾಡಿಕೊಂಡು ನಿಯಮಾನುಸಾರ ವೆಚ್ಚ ಭರಿಸಲು ಆದೇಶಿಸಿದೆ.

| | |
|---|---|
| 1. ಬಾಗಲಕೋಟೆ | ರೂ. 42.66ಲಕ್ಷ |
| 2. ಬೆಳಗಾವಿ | ರೂ. 69.33ಲಕ್ಷ |
| 3. ವಿಜಯಪುರ | ರೂ. 54.66ಲಕ್ಷ |
| 4. ಚಿಕ್ಕಮಗಳೂರು | ರೂ. 63.33ಲಕ್ಷ |
| 5. ದಕ್ಷಿಣ ಕನ್ನಡ | ರೂ. 41.33ಲಕ್ಷ |
| 6. ಗದಗ್ | ರೂ. 46.66ಲಕ್ಷ |
| 7. ಹಾವೇರಿ | ರೂ. 40.64ಲಕ್ಷ |
| 8. ಮಂಡ್ಯ | ರೂ. 65.83ಲಕ್ಷ |
| 9. ರಾಯಚೂರು | ರೂ. 54.79ಲಕ್ಷ |
| 10. ತುಮಕೂರು | ರೂ. 60.50ಲಕ್ಷ |
| 11. ಕೊಪ್ಪಳ | ರೂ. 32.80ಲಕ್ಷ |
| 12. ಉಡುಪಿ | ರೂ. 33.33ಲಕ್ಷ |
| **ಒಟ್ಟು** | **ರೂ.605.86ಲಕ್ಷ** |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

ಕೆ. ಮುರಳೀಧರ 5-12-14
(ಕೆ. ಮುರಳೀಧರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ವೆಚ್ಚ 5)

1. ಮಹಾಲೇಖಪಾಲರು (ಎ&ಇ), ಲೆಕ್ಕ ಪರಿಶೋಧನೆ 1&2, ಕರ್ನಾಟಕ, ಬೆಂಗಳೂರು

ಮು.ತಿ.ನೋ.. . . . .

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ .
3. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು,
4. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು,
6. ರಕ್ಷಾ ಕಡತಕ್ಕೆ
7. ಹೆಚ್ಚುವರಿ ಪ್ರತಿಗಳು